ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೩೧ನೇ ಆಗಸ್ಟ್ ೧೯೯೪, ಭಾದ್ರಪದ, ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೦-೨೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ, ಶ್ರೀ ಎಸ್.ಎಸ್. ಕೊಳ್ಕಿಬೈಲ್ ಅವರು ದಿನಾಂಕ : 29ನೇ ಆಗಸ್ಟ್, 1994ರಂದು ನಿಧನ ಹೊಂದಿರುವ ವಿಷಯವನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತೇನೆ.

ಶ್ರೀಯುತರು ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರ ಹಾಗೂ ಕುಂದಾಪುರ ಕ್ಷೇತ್ರಗಳಿಂದ ಒಂದನೇ ಮತ್ತು ಎರಡನೇ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ಎಂ.ಪಿ.ಸಿ.ಸಿ.ಯ ಸದಸ್ಯರಾಗಿ ಗ್ರಾಮೀಣ ಕೈಗಾರಿಕಾ ಸಹಕಾರಿ ಸೊಸೈಟಿಯ ಅಧ್ಯಕ್ಷರಾಗಿ ಮತ್ತು ವಿವಿಧ ಸೊಸೈಟಿಗಳ ನಿರ್ದೇಶಕರುಗಳಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರುಗಳು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನ ಆಚರಿಸಿದರು)

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರ ಅಪ್ಪಣೆಕೋರಿ ಪ್ರಸ್ತಾಪಿಸಲಾದ ವಿಷಯ

ಸುಪ್ರೀಂ ಕೋರ್ಟ್ 1986ರ ಮೀಸಲಾತಿ ಆದೇಶವನ್ನು ತಡೆಹಿಡಿದಿರುವ ಬಗ್ಗೆ

+ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದು ನೋಟೀಸನ್ನು ಕಳುಹಿಸಿದ್ದೇನೆ.

(ಗೊಂದಲ)

ಅಧ್ಯಕ್ಷರು : ಚಂದ್ರೇಗೌಡರು ನೋಟೀಸನ್ನು ಕಳುಹಿಸಿದ್ದಾರೆ, ಪ್ರಶ್ನೋತ್ತರ ಕಾಲ ಮುಗಿದ ನಂತರ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸ್ವಾಮಿ, ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ ಎರಡು ನಾನು ನೋಟೀಸ್ ಕಳುಹಿಸಿದ್ದೆ. ನೀವು ದಯವಿಟ್ಟು ನೋಟೀಸ್ ನೋಡುವುದಿಲ್ಲ ಬಂದುಬಿಡುತ್ತೀರಿ, ಮಧ್ಯಪ್ರವೇಶ ಮಾಡಿಬಿಡುತ್ತೀರಿ, ನಮಗೆ ಕಷ್ಟವಾಗಿ ಬಿಡುತ್ತದೆ. ದಯವಿಟ್ಟು ಅವಕಾಶ ಮಾಡಿಕೊಡಿ, ನಮ್ಮ ನೋಟೀಸಿಗೆ ಏನಾದರೂ ಬೆಲೆ ಇದೆಯೇ? 344ನೇ ವಿಧಿಯಂತೆ ನಿಯಮಾವಳಿಗಳನ್ನು ಸ್ಥಗಿತಗೊಳಿಸಿ ಈ ದಿವಸ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಪುನರ್ ನಿಯಮದಂತೆ ಕೊಟ್ಟಿದ್ದೇನೆ ಕಾರಣ